## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.

**ಸಿಸಿ ನಂಬರ್ 181/2017**

**ಸಿ ಡಬ್ಲೂ -10**
**ಪಿ ಡಬ್ಲೂ -13**

| | |
|---|---|
| **ಸಾಕ್ಷಿಯ ಹೆಸರು -** | **ಸಿಸ್ಟರ್ ರಜೀನಾ ಎಂ. ಗೆಬ್ರಿಯಲ್** |
| **ವಯಸ್ಸು -** | **67 ವರ್ಷಗಳು** |
| **ಉದ್ಯೋಗ -** | **ನಿವೃತ್ತ ಮುಖ್ಯ ಗುರುಗಳು, ಲಿಟ್ಲ ಫ್ಲಾವರ್ ಹಿರಿಯ ಪ್ರಾಥಮಿಕ ಶಾಲೆ, ಹೊಸಪೇಟೆ** |
| **ವಾಸಸ್ಥಳ -** | **ವಾರಂಗಲ್, ತೆಲಂಗಾಣ** |

**ಸಾಕ್ಷಿಯನ್ನು ದಿನಾಂಕಃ 01-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನಾನು 2002 ರಿಂದ 2018 ರವರೆಗೆ **ಲಿಟ್ಲ ಫ್ಲಾವರ್ ಹಿರಿಯ ಪ್ರಾಥಮಿಕ ಶಾಲೆ, ಹೊಸಪೇಟೆಯಲ್ಲಿ ಮುಖ್ಯ ಗುರುವಾಗಿ** ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಆರೋಪಿಗೆ ಸಂಬಂಧಿಸಿದ ನಮ್ಮ ಶಾಲೆಯಲ್ಲಿದ್ದ ಜನ್ಮ ದಿನಾಂಕ, ವರ್ಗಾವಣೆ ಪತ್ರ, ದಾಖಲಾತಿ ರಜಿಸ್ಟರ್ ನ ಪ್ರತಿ ಮತ್ತು ಇತರೆ ದಾಖಲೆಗಳನ್ನು ಪೋಲಿಸರಿಗೆ ನೀಡಿದ್ದೆ. ಸಾಕ್ಷಿ ದಾಖಲಾತಿ ರಜಿಸ್ಟರ್ ನ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ 6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 6 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಪಿ ವಾಯ್., ವಕೀಲರಿಂದ**

ನಾನು ನಿಪಿಃ 6 ರ ದಾಖಲೆಯನ್ನು ಪೋಲಿಸರಿಗೆ ನೀಡಿದಾಗ ಮುಖ್ಯ ಗುರುಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ನನಗೆ ಸದರಿ ದಾಖಲೆಯನ್ನು ಹಾಜರುಪಡಿಸಿ ಎಂದು ಪೋಲಿಸರು ಲಿಖಿತವಾಗಿ ನೋಟಿಸ್ ನೀಡಿರಲಿಲ್ಲ.

ನಾನು ಶಾಲೆಯಲ್ಲಿ ಲಭ್ಯವಿದ್ದ ದಾಖಲೆಯನ್ನೇ ನಕಲು ಮಾಡಿ ದೃಡೀಕರಿಸಿ ಪೋಲಿಸರಿಗೆ ನೀಡಿರುತ್ತೇನೆ ಅಂದರೆ ಸರಿ. ಸದರಿ ದಾಖಲೆಯಲ್ಲಿ ನಾನು ಯಾವುದೇ ತಿದ್ದುಪಡಿ ಮಾಡಿಲ್ಲ ಅಂದರೆ ಸರಿ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.